

# ಬಾಪೂ ನೆನಪಿನ ವಾರ್ಧಾ ಆಶ್ರಮ




## ಸರಳತೆಯೇ ಉಸಿರಾಗಿ ಬೆಳಕಾಗಿ ಚೆಲ್ಲವರಿದಿಹುದಿಲ್ಲಿ

**ತಮ್ಮ ಜೀವನದ ಹತ್ತು ವರ್ಷಗಳನ್ನು ಬಾಪೂ ವಾರ್ಧಾದಲ್ಲಿನ ಆಶ್ರಮದಲ್ಲಿಯೇ ಕಳೆದಿದ್ದರು. ಅವರ ತತ್ವ, ನೆನಪುಗಳನ್ನು ಜತನವಾಗಿಟ್ಟುಕೊಂಡಿರುವ ಸೇವಾಶ್ರಮ ಇದಾಗಿದೆ.**

■ ನಿರಂಜನ ವಾನಳ್ಳಿ

ಮಹಾರಾಷ್ಟ್ರದ ವಾರ್ಧಾಗೆ ಈಚೆಗೆ ಭೇಟಿ ನೀಡಿದಾಗ ತಪ್ಪದೇ ನೋಡಿದ್ದು ಗಾಂಧೀಜಿ ಸೇವಾಶ್ರಮ. ಸುಮಾರು ಮುನ್ನೂರು ಎಕರೆ ಪ್ರಶಾಂತ ಪರಿಸರ. ಅಲ್ಲಿಯ ನಿಶ್ಶಬ್ದ ವಾತಾವರಣ ಮೊದಲ ನೋಟಕ್ಕೆ ಸೆಳೆಯುವಂತಿತ್ತು. ಮೊದಲಿಗೆ ಎದುರಾಗುವುದು ಖಾದಿ ಉತ್ಪನ್ನಗಳ ಅಂಗಡಿ ಸಾಲು. ಒಳ ಹೋದರೆ ಮೊದಲು ಕಾಣುವುದು ಆದಿ ನಿವಾಸ, ನಂತರದ್ದು ಬಾಪೂ ಕುಟೀರ ಹಾಗೂ ಬಾ ಕುಟಿ. ಕೊನೆಯದು ಆಖ್ರಿ ಕುಟಿ (ಕೊನೆಯ ಕುಟೀರ). ಎದುರಿಗೆ ಇರುವ ಅಶ್ವತ್ಥ ವೃಕ್ಷವನ್ನು ಗಾಂಧಿಯವರೇ ನೆಟ್ಟಿದ್ದು, ಈಗ ಹೆಮ್ಮರವಾಗಿದೆ. ಗಾಂಧೀಜಿ ಪ್ರತಿನಿತ್ಯ ಸಂಜೆ ಪ್ರಾರ್ಥನೆ ಮಾಡುತ್ತಿದ್ದುದು ಇದೇ ಆಶ್ರಮದಲ್ಲಿ. ಜೊತೆಗೆ ಪ್ರಕೃತಿ ಚಿಕಿತ್ಸೆಯ ಪ್ರಯೋಗಗಳನ್ನು ಹಾಗೂ 'ನಯಿ ತಾಲೀಂ' ಎಂಬ ದೇಸಿ ಶಿಕ್ಷಣದ ತಾಲೀಮನ್ನು ಮಾಡಿದ್ದು ಇಲ್ಲಿಯೇ.

ಗಾಂಧೀಜಿ 1936ರಿಂದ 1946ರವರೆಗೆ ಹತ್ತು ವರ್ಷ ನೆಲೆಸಿದ್ದು ವಾರ್ಧಾದ ಸೇವಾಶ್ರಮದಲ್ಲೇ. ಅದು ಸ್ವಾತಂತ್ರ್ಯ ಹೋರಾಟದ ಉಚ್ಛ್ರಾಯ ಸ್ಥಿತಿಯ ಕಾಲ. ಗಾಂಧೀಜಿ ಜೀವನದಲ್ಲಿ ಕೂಡ ಪಲ್ಲಟದ ದಿನಗಳು. ದೇಶದ ಹಣೆಬರಹ ಬರೆದ ಅನೇಕ ನಿರ್ಧಾರಗಳನ್ನು ತೆಗೆದುಕೊಂಡದ್ದು ಇಲ್ಲಿಯೇ. ಆಗ ಕಸ್ತೂರಬಾ ಬಾಪೂ ಜೊತೆ ಇಲ್ಲಿದ್ದರು. ಖಾನ್ ಅಬ್ದುಲ್ ಗಫರ್ ಖಾನ್, ಜಮನಲಾಲ್ ಬಜಾಜ್ ಇಲ್ಲಿಗೆ ಕಾಯಂ ಅತಿಥಿಗಳಾಗಿದ್ದರು.

1948ರಲ್ಲಿ ಇಲ್ಲಿಂದ ದೆಹಲಿಗೆ ಹೋದ ಬಾಪೂ ವಾಪಸ್ಸು ಬರಲಿಲ್ಲ. ಅವರ ನಿಧನದ ಬಳಿಕ ಗಾಂಧಿ ಸೇವಾಶ್ರಮ ಸ್ಥಾಪಿಸಿ ಸಾರ್ವಜನಿಕ ಸೇವೆಗಳಿಗೆ ಮೀಸಲಾಗಿ ನಡೆಸಲಾಗುತ್ತಿದೆ. ಗಾಂಧಿಯವರಿಗೆ ಪ್ರಿಯವಾಗಿದ್ದ ಸಂಜೆ ಪ್ರಾರ್ಥನೆಯನ್ನು ಅಂದಿನಿಂದ ಇಂದಿನವರೆಗೂ ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಜೊತೆಗೆ ನಯೀ ತಾಲೀಂ ಕೂಡ ಇಂದಿಗೂ ಮುಂದುವರೆದಿದೆ. ಹೀಗಾಗಿ ವಾರ್ಧಾಕ್ಕೆ ಹೋಗುವವರಿಗೆ ಗಾಂಧಿ ಆಶ್ರಮ ಕಣ್ತುಂಬಿಕೊಳ್ಳಬೇಕಾದ ಪಾವನ ಕ್ಷೇತ್ರ.

ಗಾಂಧಿ ಕುಟೀರದಲ್ಲಿ ನಿಂತಾಗ ಕಣ್ಣು ಒದ್ದೆಯಾಗುತ್ತದೆ. ಇಪ್ಪತ್ತನೇ ಶತಮಾನದ ಅನನ್ಯ ವ್ಯಕ್ತಿಯೆಂದು ಜಗತ್ತೇ ಒಪ್ಪಿಕೊಂಡಿರುವ ಮಹಾತ್ಮ ಹತ್ತು ವರ್ಷ ತನ್ನೆಲ್ಲಾ ಆದರ್ಶ–ಹಟಮಾರಿತನದೊಂದಿಗೆ ಬದುಕಿದ ಸ್ಥಾನವಿದು. ಗಾಂಧಿ ಬಳಸುತ್ತಿದ್ದ ಪ್ರತಿಯೊಂದು ವಸ್ತುವನ್ನೂ ಇಲ್ಲಿ ಸಂರಕ್ಷಿಸಿಡಲಾಗಿದೆ. ಅವರ ಪೆನ್ನು, ಊರುಗೋಲು, ಕನ್ನಡಕ, ಟೈಪ್‌ರೈಟರ್, ಹಲ್ಲುಗಳನ್ನಿಡುತ್ತಿದ್ದ ಕರಡಿಗೆ, ಏಕತಾರಿ ತಂಬೂರಿ, ಅವರು ಬಳಸುತ್ತಿದ್ದ ಪಂಚೆ, ಕಸ್ತೂರಬಾ ಅವರ ಸೀರೆ, ದಾವಣಿ, ಎಲ್ಲವೂ ಇವೆ. ಅವರ ಸ್ನಾನದ ಕೋಣೆ, ಅಡುಗೆಮನೆ, ಅವರು ಬಳಸುತ್ತಿದ್ದ ಮಣ್ಣಿನ ಹಾಗೂ ಪಿಂಗಾಣಿ ಪಾತ್ರೆಗಳು, ದೊಡ್ಡ ದೊಡ್ಡ ಜಾರ್‌ಗಳು ಎಲ್ಲವನ್ನೂ ಇಡಲಾಗಿದೆ. ಅವರ ಕಷ್ಟವನ್ನು ನೋಡಲಾರದೇ ಒಬ್ಬ ಉದ್ಯಮಿ